ವರದಿಯನ್ನು ಒಪ್ಪಿಸುವುದು

ಶ್ರೀ ಬಿ. ಆರ್. ಯಾವಗಲ್ (ಉಪಾಧ್ಯಕ್ಷರು).— ಶಿವಮೊಗ್ಗ ಜಿಲ್ಲೆಯ ತರ್ಲಘಟ್ಟ ಗ್ರಾಮದಲ್ಲಿ ಶ್ರೀ ಚಂದ್ರಪ್ಪ ಎಂಬ ಹರಿಜನ ವ್ಯಕ್ತಿಯ ಮೇಲೆ ನಡೆಯಿತೆನ್ನಲಾದ ದೌರ್ಜನ್ಯದ ಘಟನೆಯ ಬಗ್ಗೆ ಅರ್ಜಿಗಳ ಸಮಿತಿಯ ವರದಿಯನ್ನು ಸದನಕ್ಕೆ ಒಪ್ಪಿಸಬಯಸುತ್ತೇನೆ.

ಅಧ್ಯಕ್ಷರು.— ವರದಿಯನ್ನು ಒಪ್ಪಿಸಲಾಯಿತು.

ಅಧ್ಯಕ್ಷರು.—ಶ್ರೀಮತಿ ಕೆ. ಎಸ್. ನಾಗರತ್ನಮ್ಮ, ಶ್ರೀ ಎಸ್. ಬಂಗಾರಪ್ಪ ಮತ್ತು ಶ್ರೀ ಎಂ. ವೀರಪ್ಪಮೊಯ್ಲಿ, ಶ್ರೀ ಮಹಮದ್ ಲೈಕುದ್ದೀನ ಹಾಗೂ ಶ್ರೀಮತಿ ಮುಕ್ತಾರುನ್ನೀಸಾ ಅವರುಗಳು ಕಳುಹಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಕಾರಣವೇನು ? ತಮಗೇನಾದರೂ ಪತ್ರ ಬರೆದಿದ್ದಾರೆಯೆ ?

ಅಧ್ಯಕ್ಷರು — ಪತ್ರ ಬರೆದಿದ್ದಾರೆ. ವಿಧಾನಸಭೆಯಲ್ಲಿ ೨೮-೩-೮೮ ರಂದು ಸೋಮವಾರ ಶ್ರೀಮತಿ ನಾಗರತ್ನಮ್ಮ ಮತ್ತಿತರರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಬೇಕಾಗಿತ್ತು. ಆದರೆ ಉತ್ತರ ಇನ್ನೂ ದೊರಕದಿರುವ ಕಾರಣ ದಯಮಾಡಿ ಇದನ್ನು ೨೯-೩-೮೮ಕ್ಕೆ ತೆಗೆದುಕೊಳ್ಳಿ ಎಂದು ಕೋರಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಉತ್ತರ ಬಾರದಿದ್ದರೆ ಸಚಿವರಾದರೂ ಸಭೆಯಲ್ಲಿ ಇರಬೇಕಲ್ಲ,

ಅಧ್ಯಕ್ಷರು. — ನಾಳೆ ಎಂದು ಹೇಳಿದ್ದಾರೆ, ನಾಳೆ ತಮಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಇರಬಹುದು. ಆದರೆ ಈ ಕಾರಣವನ್ನು ಮಾನ್ಯ ಮಂತ್ರಿಗಳಾದ ಚಂದ್ರಶೇಖರವರು ಏಕೆ ಇಲ್ಲಿಬಂದು ಕೊಡಲಿಲ್ಲ? ಇಲ್ಲಿಗೆ ಅವರು ಬರಬೇಕಾಗಿತ್ತಲ್ಲ. ಆ ಸದನದಲ್ಲಿ ಏನಾದರೂ ಇದ್ದಾರೆಯೆ ? ಅವರು ಇಲ್ಲಿ ಬರುವುದಕ್ಕೆ ಏನು ತೊಂದರೆ ಇತ್ತು ?

ಅಧ್ಯಕ್ಷರು.— ನೂರಕ್ಕೆ ನೂರೂ ಮಂತ್ರಿಗಳಾಗಲಿ, ನೂರಕ್ಕೆ ನೂರೂ ಸದಸ್ಯರಾಗಲಿ ಇಲ್ಲಿ ಇರಬೇಕೆಂದು ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ. — ವಿಧಾನ ಪರಿಷತ್ತಿನಲ್ಲಿ ಇದ್ದಾರೆಯೆ ? ಅಥವಾ ದೇವೇಗೌಡರ ಹಾಗೆ ರಾಜೀನಾಮೆ ಕೊಟ್ಟಿದ್ದಾರೆಯೆ ?

ಅಧ್ಯಕ್ಷರು.— ರಾಜೀನಾಮೆಯ ವಿಚಾರದಲ್ಲಿ ಆಗಲೇ ಉತ್ತರಿಸಿದ್ದಾರೆ. ಯಾರೂ ರಾಜೀನಾಮೆ ಕೊಟ್ಟಿಲ್ಲವೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು.— ನಾಳೆ ಬರದಿದ್ದರೆ ನೋಡೋಣ.

ಶ್ರೀ ಧರ್ಮಸಿಂಗ್.— ಸದನದಲ್ಲಿ ಗಮನ ಸೆಳೆಯುವ ಸೂಚನೆಯನ್ನು ಯಾರಾದರೂ ಸದಸ್ಯರು ತಂದರೆ ಸಂಬಂಧಪಟ್ಟ ಮಂತ್ರಿಗಳು.....

ಅಧ್ಯಕ್ಷರು.— ನಾಳೆ ನಿಮಗೆ ಉತ್ತರ ಬರುತ್ತದೆ, ನಾಳೆ ಉತ್ತರ ಕೊಡುವುದಾಗಿ ಮಂತ್ರಿಗಳ ಪತ್ರ ಬರೆದಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಈ ಮನೆಯ ಸದಸ್ಯೆಯರನ್ನು ಅರೆಸ್ಟ್ ಮಾಡಿದ್ದಾರೆ. ಇದು ಬಹಳ ಗಂಭೀರವಾದ ಪರಿಸ್ಥಿತಿ. ಅಲ್ಲದೇ, ಪ್ರಿವಿಲೇಜ್ ಇಶ್ಯೂ. ಇದರ ಮೇಲೆ ನಾವು ಹಕ್ಕುಚ್ಯುತಿ ಪ್ರಶ್ನೆಯನ್ನು ಎತ್ತಬೇಕಾಗಿತ್ತು. ಇದಕ್ಕೆ ಮುಖ್ಯ ಮಂತ್ರಿಗಳು ಉತ್ತರಿಸಲಿ. ಮಾನ್ಯ ಮಂತ್ರಿಗಳನ್ನು ಕರೆಯಿಸಿ ತಾವು ಛೀಮಾರಿ ಹಾಕಿ. ಮಂತ್ರಿಮಂಡಲಕ್ಕೆ ಛೀಮಾರಿ ಹಾಕಿ.

ಅಧ್ಯಕ್ಷರು.— ನಾಳೆ ಎಂದು ಹೇಳಿದ್ದಾರೆ, ನಾಳೆ ಉತ್ತರ ಕೊಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ದಯಮಾಡಿ ಕೇಳಬೇಕು, ಇದು ಗಮನ ಸೆಳೆಯುವ ಸೂಚನೆ ಇಲ್ಲಿ ಏನಂ ಪ್ರಶ್ನೆ ಉದ್ಭವವಾಗಿದೆ ಎಂದರೆ.....